# ಎಂಎಸ್‌ಎಂಇಗಳಿಗೆ ಗ್ರೇಡಿಂಗ್: ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್‌ನಿಂದ ಡಿಜಿಟಲ್ ಪ್ಲಾಟ್‌ಫಾರಂ

ಬೆಂಗಳೂರು: ಕ್ರೆಡಿಟ್ ರೇಟಿಂಗ್ ಏಜೆನ್ಸಿ ಬ್ರಿಕ್‌ವರ್ಕ್ ರೇಟಿಂಗ್ಸ್ ಒಡೆತನದಲ್ಲಿರುವ ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಎಂಎಸ್‌ಎಂಇ1 ಸೇವೆಯನ್ನು ಆರಂಭಿಸಿದೆ.

ಇದುಡಿಜಿಟಲ್ ವೇದಿಕೆಯಾಗಿದ್ದು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಎಲ್ಲ ರೀತಿಯ ಡಿಜಿಟಲ್ ಸೇವೆಯನ್ನು ಒದಗಿಸಲಿದೆ. ಎಂಎಸ್‌ಎಂಇ ಪರ್ಫಾರ್ಮೆನ್ಸ್‌ಗ್ರೇಡಿಂಗ್, ಡ್ಯೂಡಿಲಿಜೆನ್ಸ್, ಬಿಡಬ್ಲ್ಯುಎ ಪ್ರಮಾಣಿತ ಸರ್ಟಿಫಿಕೇಷನ್ ಮತ್ತು ಕಂಪನಿ ಪ್ರೊಫೈಲಿಂಗ್ ಇದರಲ್ಲಿ ಸೇರಿದೆ.

ಈ ಡಿಜಿಟಲ್ ವೇದಿಕೆ, ಎಲ್ಲಾ ಸಮಯದಲ್ಲಿಯೂ ವೆಬ್ ಮೂಲಕ ಸೇವೆಗೆ ಲಭ್ಯವಿದ್ದು, ಬಳಕೆದಾರರಿಗೆ ಅನುಕೂಲಕರವಾದ ಮತ್ತು ಕೊಡುಗೆಖರೀದಿಯಿಂದ ದಾಖಲೆಗಳನ್ನು ಅಪ್‌ಲೋಡ್ ಮಾಡುವುದರಿಂದ ಪರಿಪೂರ್ಣ ವರದಿ ಪಡೆಯುವವರೆಗೂ ಕಾಗದರಹಿತ ಅನುಭವವನ್ನುಒದಗಿಸುತ್ತದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಅತ್ಯುತ್ತಮವಾದ ಬಿಡಬ್ಲ್ಯುಎ ಎಸ್‌ಎಂಇ1ರಿಂದ ಅತಿ ಕಳಪೆ ಸಾಧನೆಯ ಬಿಡಬ್ಲ್ಯುಎ ಎಸ್‌ಎಂಇ8ವರೆಗೆ ಬ್ರಿಕ್‌ವರ್ಕ್ಸ್‌ಅನಾಲಿಟಿಕ್ಸ್ ಸಾಮರ್ಥ್ಯಗ್ರೇಡಿಂಗ್‌ಗಳನ್ನು ನೀಡಲಾಗುತ್ತದೆ. ಹಣಕಾಸು ವಿಶ್ಲೇಷಣೆ, ಉತ್ಪಾದಿಸುವ ಮತ್ತು ವಹಿವಾಟಿನಉತ್ಪನ್ನದ ಸ್ವರೂಪ ಮತ್ತು ಮಾರುಕಟ್ಟೆಯಲ್ಲಿಅದಕ್ಕಿರುವ ಬೇಡಿಕೆ, ಪ್ರಕ್ರಿಯೆಯಲ್ಲಿರುವಅಪಾಯ, ಮಾರುಕಟ್ಟೆಯಲ್ಲಿ ಸ್ಪರ್ಧೆಯ ಬಲ, ನಿರ್ವಹಣೆಗುಣಮಟ್ಟ ಮತ್ತುಉದ್ಯಮಕ್ಷೇತ್ರದ ಪರಿಸ್ಥಿತಿ ಈ ಐದು ಅಂಶಗಳನ್ನು ಗಮನದಲ್ಲಿಟ್ಟುಕೊಂಡುಗ್ರೇಡಿಂಗ್ ನೀಡಲಾಗುತ್ತದೆಎಂದು ಕಂಪನಿ ಪ್ರಕಟಣೆ ತಿಳಿಸಿದೆ.